ಜನರಲ್ಲಿ ಕಡಿಮೆಯಾಗಬಹುದು. ಆಗ ಟೀವಿ ಚಾನೆಲ್‌ನವರು ಬೇರೊಂದು ದಾರಿ ಹುಡುಕಿಕೊಳ್ಳಬಹುದು.

ಇಲ್ಲಿ ಪ್ರೇಕ್ಷಕನ ಗ್ರಾಹಕೀಕರಣವೂ ಮುಖ್ಯ ಪಾತ್ರ ವಹಿಸುತ್ತಿದೆ. ಸಿನಿಮಾ ಪ್ರೇಕ್ಷಕ ಜಾಣ ಗ್ರಾಹಕನೂ ಆಗಿ ಪರಿವರ್ತನೆ ಹೊಂದಿದ್ದಾನೆ. 'ತಿಂಗಳಿಗೆ 250 ರೂಪಾಯಿ ಕೊಟ್ಟು ಬೇಕಾದಷ್ಟು ಸಿನಿಮಾಗಳನ್ನು ಮನೆಯಲ್ಲೇ ಕುಳಿತು ನೋಡುವ ಅವಕಾಶ' ಈಗ ಆತನ ಕೈಬೆರಳ ತುದಿಯಲ್ಲಿದೆ. ನಗರದ ಟ್ರಾಫಿಕ್ ಜಾಲ ಹೊಕ್ಕು ಕಷ್ಟುಪಟ್ಟು ಥಿಯೇಟರಿಗೆ ಹೋಗಿ, ನೂರಿನ್ನೂರು ರೂಪಾಯಿಯ ಟಿಕೆಟ್ ಖರೀದಿಸಿ, ದುಬಾರಿ ಬೆಳೆಯ ತಿನಿಸುಗಳನ್ನು ತಿಂದು ಸಿನಿಮಾ ನೋಡುವುದು ಮಧ್ಯಮ ವರ್ಗದ ಪ್ರೇಕ್ಷಕನಿಗೂ ಇವತ್ತು ಬಹುದೊಡ್ಡ ಹೊರೆ. ಅದೂ ಅಲ್ಲದೆ ದೊಡ್ಡ ತೆರೆಯಲ್ಲಿ ನೋಡದಿದ್ದರೆ ದೊಡ್ಡ ನಷ್ಟವೇನೂ ಇಲ್ಲ ಎನ್ನುವಂತಹ ಕನ್ನಡ ಸಿನಿಮಾಗಳೇ ದೊಡ್ಡ ಪ್ರಮಾಣದಲ್ಲಿ ಬರುತ್ತಿರುವುದು ಗೋಡೆಯ ಮೇಲಿನ ಬರಹದಷ್ಟೇ ಸ್ಪಷ್ಟವಿದೆ. ನಷ್ಟದ ಬಗ್ಗೆ ಸಿನಿಮಾ ನಿರ್ಮಾಪಕರು ಯೋಚಿಸಿದಂತೆಯೇ ಗ್ರಾಹಕ ಕೂಡಾ ಯೋಚಿಸುತ್ತಾನೆ ಎನ್ನುವುದು ನಮ್ಮ ಚಿತ್ರೋದ್ಯಮಿಗಳಿಗೆ ಏಕೆ ಹೊಳೆಯುವುದಿಲ್ಲ?

'ಈಗಾಗಲೆ ಸಹಿ ಹಾಕಿರುವ ರಿಯಾಲಿಟಿ ಷೋಗಳನ್ನು ಹೀರೋಗಳು ಮಾಡಿ ಮುಗಿಸಲಿ. ಮುಂದೆ ಯಾವುದಕ್ಕೂ ಸಹಿ ಹಾಕಬಾರದು ಎನ್ನುವ ಷರತ್ತುಗಳೆಲ್ಲ ಅಸಂಬದ್ಧ' ಎನ್ನುವುದು ಇನ್ನೊಬ್ಬ ಹೀರೋ ಅವರ ಮಾತು. ಆದರೆ ಈ ಮಾತನ್ನು ಬಹಿರಂಗವಾಗಿ ಹೇಳಲು ಅವರು ಒಪ್ಪುವುದಿಲ್ಲ. 'ಈಗ ನಡೆಯುತ್ತಿರುವ ರಿಯಾಲಿಟಿ ಷೋಗಳನ್ನು ರಾತ್ರಿ ಹತ್ತು ಗಂಟೆಯ ಬಳಿಕ ಪ್ರಸಾರ ಮಾಡಬೇಕು ಎನ್ನುವ ಬೇಡಿಕೆಗಳನ್ನು ಒಪ್ಪುವ ಪ್ರಶ್ನೆಯೇ ಇಲ್ಲ' ಎನ್ನುವುದು ಟೀವಿ ಮುಖ್ಯಸ್ಥರೊಬ್ಬರ ಮಾತು. ಅವರೂ ಅದನ್ನು ಬಹಿರಂಗವಾಗಿ ಹೇಳಲು ಬಯಸುವುದಿಲ್ಲ.

ಮುಂದೇನು...? ಎನ್ನುವುದೀಗ ಪ್ರಶ್ನೆ. ಚಲನಚಿತ್ರ ವಾಣಿಜ್ಯ ಮಂಡಳಿಯ ಸಭೆಯಲ್ಲಿ ಕೆಲವು ನಿರ್ಮಾಪಕರು ವೀರಾವೇಷದ ಮಾತುಗಳನ್ನೂ ಆಡಿದ್ದಾರಂತೆ. 'ಮೊದಲು ಮನವಿ ಮಾಡುವುದು. ಹೀರೋಗಳು ನಮ್ಮ ಮಾತನ್ನು ಕೇಳದಿದ್ದರೆ ಅವರ ಸಿನಿಮಾಗಳ ಶೂಟಿಂಗ್‌ನಲ್ಲಿ ತಂತ್ರಜ್ಞರು ಭಾಗವಹಿಸದೆ ದೂರ ಉಳಿಯುವುದು' ಎನ್ನುವ ಸಲಹೆಯೂ ಪರಿಶೀಲನೆಯಲ್ಲಿದೆಯಂತೆ. 'ಉದ್ಯಮವನ್ನು ಬಂದ್ ಮಾಡೋಣ. ಸಿನಿಮಾದಿಂದಲೇ ಬೆಳೆದಿರುವ ಹೀರೋಗಳು ಅದಕ್ಕೆ ಕಾರಣರಾದರೆ ನಾವೇನು ಮಾಡಲಾಗುತ್ತದೆ' ಎನ್ನುತ್ತಾರೆ ಇನ್ನೊಬ್ಬ ಹೆಸರು ಹೇಳಲು ಇಚ್ಛಿಸದ ನಿರ್ಮಾಪಕರು.

ಸಾ.ರಾ.ಗೋವಿಂದು ಅವರನ್ನು ಈ ಬಗ್ಗೆ ವಿಚಾರಿಸಿದರೆ, 'ಅಧ್ಯಕ್ಷನಾಗಿ ನಾನು ಜನರಲ್ ಬಾಡಿ ಮೀಟಿಂಗ್ ಸೂಚಿಸಿದಂತೆ ನಡೆಯುತ್ತೇನೆ. ಇಲ್ಲಿ ನನ್ನ



'ಹೀರೋಗಳು ಬೆಳೆದದ್ದೇ ಸಿನಿಮಾಗಳಿಂದ. ಈಗ ನಿರ್ಮಾಪಕರ ಕಷ್ಟಕಾಲದಲ್ಲಿ ಅವರು ನೆರವಿಗೆ ಬರದಿದ್ದರೆ ಹೇಗೆ?'

—ರಾಕ್‌ಲೈನ್ ವೆಂಕಟೇಶ್

ನಿರ್ಧಾರ ಏನಿಲ್ಲ' ಎನ್ನುತ್ತಾರೆ. 'ಏನಿದರ ಅರ್ಥ?' ಎಂದು ಕೆದಕಿ ಕೇಳಿದರೆ 'ಕಠಿಣ ನಿರ್ಧಾರಗಳನ್ನು ಕೈಗೊಳ್ಳುವ ಸಂದರ್ಭವೂ ಬರಬಹುದು' ಎಂದು ಮುಗುಂ ಆಗಿ ನುಡಿಯುತ್ತಾರೆ.

ಆದರೆ ಉದ್ಯಮದ ಕೆಲವು ವಲಯದ ಪ್ರಕಾರ, ಈ ವಿವಾದ ಅಂತಹ ಗಂಭೀರ ತಿರುವು ಪಡೆಯುವ ಸಾಧ್ಯತೆ ಇಲ್ಲ. 'ಸಾರ್, ಪ್ರತಿಸಲ ನಿರ್ಮಾಪಕರ ಸಂಘದ ಚುನಾವಣೆ ಹತ್ತಿರ ಬಂದಾಗಲೂ ಇಂತಹದ್ದೊಂದು ಪ್ರಹಸನ ನಡೆಯುತ್ತದೆ. ಈ ಸಲವೂ ಅದೇ ಆಗುತ್ತಿದೆ. ಇದು ಟೈ ಪಂದ್ಯ. ತಮಗೆ ಇಷ್ಟ ಇರುವಷ್ಟು ಕಾಲ ಹೀರೋಗಳು ರಿಯಾಲಿಟಿ ಷೋಗಳಲ್ಲಿ ಭಾಗವಹಿಸುತ್ತಾರೆ. ಕೈತುಂಬ ಕೆಲಸ ಸಿಕ್ಕಿದರೆ ಸಿನಿಮಾ ಶೂಟಿಂಗಿಗೂ ಬರುತ್ತಾರೆ' ಎನ್ನುವುದು ನಿರ್ದೇಶಕರೊಬ್ಬರ ಮಾತು.

ರಾಕ್‌ಲೈನ್ ವೆಂಕಟೇಶ್ ಅವರು ನಿರ್ಮಾಪಕರು ಮಾತ್ರವಲ್ಲ, ಕಲಾವಿದರ ಸಂಘದ ಉಪಾಧ್ಯಕ್ಷರೂ ಹೌದು. (ಅಂಬರೀಶ್ ಅಧ್ಯಕ್ಷರು) 'ನೀವೇ ಮುಂದೆ ನಿಂತು ಈ ಬಿಕ್ಕಟ್ಟನ್ನು ಬಗೆಹರಿಸಬಹುದಲ್ಲ..?' ಎಂದು ಕೇಳಿದರೆ, 'ಕಲಾವಿದರ ಸಂಘ ಇರುವುದು ಟೀವಿ ಜತೆಗಿನ ವಿವಾದ ಬಗೆಹರಿಸಲು ಅಲ್ಲ. ಕಲಾವಿದರ ಮಧ್ಯೆ ಮತ್ತು ತಂತ್ರಜ್ಞರ ನಡುವೆ ಇರುವ ವಿವಾದಗಳನ್ನು ಬಗೆಹರಿಸಲು. ಕಲಾವಿದರ ಸಂಘವನ್ನು ಇದರಲ್ಲಿ ಎಳೆಯುವುದು ಬೇಡ' ಎಂದರು.

ಇಂತಹ ಬಿಕ್ಕಟ್ಟುಗಳನ್ನು ನಿವಾರಿಸಿಕೊಳ್ಳಲು ಚಿತ್ರೋದ್ಯಮ ಏನು ಮಾಡಬಹುದು ಎನ್ನುವುದನ್ನು ಯಾರೂ ಚರ್ಚಿಸುತ್ತಿಲ್ಲ. ಸಿನಿಮಾ ನಿರ್ಮಿಸಲು ಭಾರೀ ಸಂಭಾವನೆ ಪಡೆಯುವ ದೊಡ್ಡ ಹೀರೋಗಳೇ ಏಕೆ ಬೇಕು? ಕನ್ನಡದಲ್ಲಿ ಸಾಕಷ್ಟು ಉತ್ತಮ ಸಿನಿಮಾಗಳನ್ನು ಮಾಡಿರುವ ಸೃಜನಶೀಲ ನಿರ್ದೇಶಕರು ಎಷ್ಟೊಂದು ಜನ ಕಾದು ಕುಳಿತಿಲ್ಲ? ಅವರನ್ನು ಬಳಸಿಕೊಂಡು ಹೊಸ ಹೀರೋಗಳನ್ನು ಹುಟ್ಟು ಹಾಕಲು ಈ ನಿರ್ಮಾಪಕರು ಏಕೆ ಪ್ರಯತ್ನಿಸಬಾರದು? ಹೊಸ ನಿರೂಪಣೆಯ, ಹೊಸ ಮಾದರಿಯ

ಕಲರ್ಸ್ ಕನ್ನಡದ ಡಾನ್ಸಿಂಗ್ ಸ್ಟಾರ್ ಕಾರ್ಯಕ್ರಮದಲ್ಲಿ ನಟ ರವಿಚಂದ್ರನ್, ನೃತ್ಯ ನಿರ್ದೇಶಕ ಚಿನ್ನಿ ಪ್ರಕಾಶ್

